# ಕಿಸ್ಸಿಂಗ್ ಲಿಂಕ್!

'ಕನ್ನಡದ ನಿರ್ದೇಶಕರು ಬೇರೆ ಭಾಷೆಯ ನಟೀಮಣಿಯರಿಗೆ ಯಾಕೆ ಮಣೆ ಹಾಕುತ್ತಾರೆ?' ಈ ಪ್ರಶ್ನೆ ಹೊಸದಲ್ಲ. ಇದಕ್ಕೆ ಆಯಾ ಸಂದರ್ಭಕ್ಕನುಗುಣವಾಗಿ ಹೊಸ ಹಳೆ ಕಾರಣಗಳನ್ನೂ ನಿರ್ದೇಶಕರು ಕೊಟ್ಟುಕೊಳ್ಳುತ್ತಲೇ ಬಂದಿದ್ದಾರೆ. ಇತ್ತೀಚೆಗೆ ಒಂದು ಸಿನಿಮಾ ಪತ್ರಿಕಾಗೋಷ್ಠಿಯಲ್ಲಿ ಮತ್ತಿದೇ ಪ್ರಶ್ನೆ ಬಂತು. ಅದಕ್ಕೆ ಕಾರಣ ಎರಡು ಮುಂಬೈ ಬೆಡಗಿಯರು ವೇದಿಕೆಯ ಮೇಲೆ ಕೂತಿದ್ದರು. ಆದರೆ ಈ ಸಲ ಉತ್ತರಿಸಿದ್ದು ಮಾತ್ರ ನಿರ್ದೇಶಕರಲ್ಲ, ನಾಯಕನಟ! ಅವರ ಉತ್ತರವೂ ಅಷ್ಟೇ ಸ್ವಾರಸ್ಯಕರವಾಗಿತ್ತೆನ್ನಿ.

ಆ ಸಿನಿಮಾದ ಹೆಸರು 'ಮೈ ನೇಮ್ ಈಸ್ ರಾಜ್'. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಕೇರಳ, ಕೋಲಾರ ಮತ್ತು ಬೆಂಗಳೂರಿನಲ್ಲಿ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಅಶ್ವಿನ್ ಕೃಷ್ಣ ಅವರು ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ನಾಯಕ ರಾಜ್‌ಸೂರ್ಯ.

ರಾಜ್ ಜತೆಗೆ ಇಬ್ಬರು ಮುಂಬೈ ಬೆಡಗಿಯರು ಈ ಸಿನಿಮಾದಲ್ಲಿ ಬಳುಕಲಿದ್ದಾರೆ. ಮುಂಬೈ ಹುಡುಗಿಯನ್ನು ಕರೆತಂದಿದ್ದು ಯಾಕೆ ಎಂಬ ಪ್ರಶ್ನೆಗೆ 'ಕನ್ನಡ ಯಾವ ನಟಿಯರೂ ಲಿಪ್‌ಲಾಕ್ ದೃಶ್ಯಗಳಲ್ಲಿ ನಟಿಸಲು ಒಪ್ಪಲಿಲ್ಲ ಹಾಗಾಗಿ ಹಾಗಾಗಿ ಮುಂಬೈ ಹುಡುಗಿಯರನ್ನು ಕರೆತರಬೇಕಾಯ್ತು' ಎಂದು ಉತ್ತರ ನೀಡಿದರು. ಮಿಸ್ಸಾಗಿದ್ದ ಕಿಸ್ಸಿಂಗ್ ಲಿಂಕ್ ಅನ್ನು ಮುಂಬೈನಿಂದ ಆಮದು ಮಾಡಿಕೊಂಡ ಖುಷಿ ಅವರ ಮಾತಿನಲ್ಲಿತ್ತು. ಆಕರ್ಷಕ ಮತ್ತು ನಸ್ರೀನ್ ಅವರ ಪಕ್ಕದಲ್ಲಿಯೇ ಕೂತು ಕನ್ನಡ ಅರ್ಥವಾಗದೆ ಪಿಳಿಪಿಳಿ ಕಣ್ಣು ಬಿಡುತ್ತಿದ್ದರು.

ಈ ಚಿತ್ರ ಸೈಕಾಲಾಜಿಕಲ್ ಥ್ರಿಲ್ಲರ್ ಕಥೆಯ ಹಂದರ ಹೊಂದಿದೆಯಂತೆ. ಪ್ರಭುಸೂರ್ಯ ಎನ್ನುವವರು ಖಳನಟನಾಗಿ ಕಾಣಿಸಿಕೊಂಡಿದ್ದಾರೆ. ನಾಯಕ ಹೆಂಡತಿಯೊಂದಿಗೆ ಮಧುಚಂದ್ರಕ್ಕೆ ಹೋದಾಗ ನಡೆಯುವ ಭಯಾನಕ ಘಟನಾವಳಿಗಳ ಸುತ್ತಲೇ ಈ ಸಿನಿಮಾ ಸುತ್ತುತ್ತದೆಯಂತೆ.





# ನಿರ್ದೇಶನದ ಕ್ಯಾಪ್ ತೊಟ್ಟ ವಿಜಿ!

2018ರಲ್ಲಿ ತೆರೆಕಂಡ ದುನಿಯಾ ವಿಜಯ್ ಅವರ ಎರಡು ಸಿನಿಮಾಗಳು (ಕನಕ ಮತ್ತು ಜಾನಿ ಜಾನಿ ಎಸ್ ಪಪ್ಪಾ) ಚಿತ್ರಮಂದಿರದಲ್ಲಿ ಸದ್ದುಮಾಡಿದ್ದು ಅಷ್ಟಕ್ಕಷ್ಟೆ. 2019ರಲ್ಲಿಯಂತೂ ವಿಜಿ ವೈಯಕ್ತಿಕ ಬದುಕಿನ ವಿವಾದಗಳಿಂದ ಸುದ್ದಿಯಾಗಿದ್ದೇ ಹೆಚ್ಚು. ಸಂಸಾರ ತಾಪತ್ರಯ ಬೀದಿಗೆ ಬಂದಿದ್ದು ಒಂದು ಕಡೆಯಾದರೆ, ಪಾನಿಪುರಿ ಕಿಟ್ಟಿ ಸಂಬಂಧಿಯ ಜತೆ ನಡೆದ ಜಗಳ ಪೊಲೀಸ್ ಸ್ಟೇಷನ್ ಮೆಟ್ಟಲೂ ಏರಿತ್ತು. ಇದೇ ಗದ್ದಲದಲ್ಲಿಯೇ ಅವರ ಸಿನಿಮಾಗಳೂ ಹಿನ್ನೆಲೆಗೆ ಸರಿದವು.

'ಚೂರಿಕಟ್ಟೆ' ನಿರ್ದೇಶಕ ರಾಘು ಶಿವಮೊಗ್ಗ ನಿರ್ದೇಶಿಸುತ್ತಿರುವ 'ಕುಸ್ತಿ' ಸಿನಿಮಾಗೆ ದುನಿಯಾ ವಿಜಯ್ ಜತೆಗೆ ಅವರ ಮಗ ಸಾಮ್ರಾಟ್ ಕೂಡ ನಟಿಸಲಿದ್ದಾನೆ ಎಂಬುದು ಜೋರಾಗಿಯೇ ಸುದ್ದಿಯಾಗಿತ್ತು. ಆ ಸಿನಿಮಾದ ಟೀಸರ್ ಕೂಡ ಗಮನಸೆಳೆದಿತ್ತು. ಆದರೆ ನಂತರದಲ್ಲಿ ಆ ಸಿನಿಮಾ ನಿಂತುಹೋಗಿದ್ದೂ ಅಷ್ಟೇ ಜೋರಾಗಿ ಸದ್ದಾಗಿತ್ತು. ಈ ಸುದ್ದಿಗೆ ಇಂಬು ನೀಡುವ ಹಾಗೆಯೇ ರಾಘು ಶಿವಮೊಗ್ಗ ಮತ್ತು ದುನಿಯಾ ವಿಜಯ್ ಅವರದ್ದೇ ಕಾಂಬಿನೇಷನ್‌ನಲ್ಲಿ 'ಸಲಗ' ಎಂಬ ಇನ್ನೊಂದು ಸಿನಿಮಾ ಕೂಡ ಘೋಷಣೆಯಾಗಿತ್ತು.

ಆದರೆ ಇತ್ತೀಚೆಗಿನ ಸುದ್ದಿ ಏನೆಂದರೆ 'ಸಲಗ'ದ ಸಹವಾಸದಿಂದ ರಾಘು ಶಿವಮೊಗ್ಗ ದೂರ ಸರಿದಿದ್ದಾರೆ. ಅವರ ಬದಲಿಗೆ ಸ್ವತಃ ವಿಜಯ್ ಅವರೇ 'ಸಲಗ'ದ ಬೆನ್ನಮೇಲೆ ಅಂಕುಶ ಹಿಡಿದು ಕೂಡುತ್ತಿದ್ದಾರೆ. ಅಂದರೆ ನಿರ್ದೇಶನದ ಜವಾಬ್ದಾರಿಯನ್ನೂ ಅವರೇ ನಿರ್ವಹಿಸುತ್ತಿದ್ದಾರೆ. ಈ ಹಿಂದೆ ವಿಜಯ್ 'ಮಾಸ್ತಿಗುಡಿ' ಸಿನಿಮಾಗೆ ಕಥೆ ಬರೆದಿದ್ದರು. ಈಗ ನಟನೆಯ ಜತೆಗೆ ಆ್ಯಕ್ಷನ್ ಕಟ್ ಕೂಡ ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಹಣವನ್ನೂ ಅವರೇ ಹೂಡುತ್ತಿದ್ದಾರೆ.

ಮೂಲಗಳ ಪ್ರಕಾರ 'ಟಗರು' ಖ್ಯಾತಿಯ ಮಾಸ್ತಿ ಸಲಗನಿಗೆ ಹರಿತ ಮಾತುಗಳನ್ನು ಪೋಣಿಸುತ್ತಿದ್ದಾರಂತೆ. ನಾಯಕಿ ಮತ್ತು ಇತರ ಪಾತ್ರವರ್ಗದ ಅಂತಿಮ ಆಯ್ಕೆ ಇನ್ನಷ್ಟೇ ನಡೆಯಬೇಕಿದೆ. ಈ ಒಂಟಿ ಸಲಗದ ಸವಾರಿ ದುನಿಯಾ ವಿಜಯ್ ಅವರ 'ಇಮೇಜ್' ಅನ್ನು ಇನ್ನಷ್ಟು ಗಟ್ಟಿಗೊಳಿಸುವ ಹಾಗೆಯೇ ಇರುತ್ತದೆ ಎಂಬುದು ಗಾಂಧಿನಗರದ ಗಲ್ಲಿ ಬಾಯ್ಸ್ ಊಹೆ.

ಚಿತ್ರಗಳು: ಕೆ.ಎನ್. ನಾಗೇಶ್ ಕುಮಾರ್